# ವಿವೇಕಾನಂದ ಬಾಲಕಸಂಘ

ಸುರೇಶ ಮೂನ

*ಶಿಕ್ಷಕರೂ ತಪ್ಪಾಸಿ ಬರಹಗಾರರೂ ಬೆಂಗಳೂರು ರಾಮಕೃಷ್ಣ ಮಠದ ಭಕ್ತರೂ ಆಗಿರುವ ಶ್ರೀ ಸುರೇಶ ಮೂನ ಅವರು ಬೆಂಗಳೂರಿನ ಹೆಮ್ಮೆಯ ಸಂಸ್ಥೆಯೊಂದರ ಪರಿಚಯವನ್ನು ನೀಡಿದ್ದಾರೆ.*

**ದ**ಕ್ಷಿಣ ಬೆಂಗಳೂರಿನ ಬುಲ್‌ಟೆಂಪಲ್ ರಸ್ತೆಯಲ್ಲಿರುವ ರಾಮಕೃಷ್ಣ ಮಠ, ನಗರದ ಪ್ರತಿಷ್ಠಿತ ಹಾಗೂ ಹೆಮ್ಮೆಯ ಧಾರ್ಮಿಕ ಹಾಗೂ ಸಾಮಾಜಿಕ ಸೇವಾಸಂಸ್ಥೆ. ಇಲ್ಲಿ ನಡೆಯುವ ನಿತ್ಯ ಪೂಜಾಕಾರ್ಯಗಳು, ಭಜನೆಗಳು, ಉಪನ್ಯಾಸಗಳು, ಜಯಂತ್ಯುತ್ಸವಗಳು ಅದೆಷ್ಟು ಮಂದಿ ಭಕ್ತರನ್ನು ಆಕರ್ಷಿಸುತ್ತವೆ ಎಂದರೆ ಇಡೀ ಭಾರತದಲ್ಲೇ ರಾಮಕೃಷ್ಣ ಮಠಗಳ ಪೈಕಿ ಅತಿ ಹೆಚ್ಚು ಭಕ್ತರನ್ನು ಆಕರ್ಷಿಸುವ ಕೇಂದ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕೇಂದ್ರದ ಮತ್ತೊಂದು ಮಹತ್ ಸಾಧನೆಯೆಂದರೆ ರಾಮಕೃಷ್ಣ ಮಿಷನ್ನಿನ ಭಾರತದ ಕೇಂದ್ರಗಳ ಪೈಕಿ ಪ್ರಥಮ ಬಾರಿಗೆ ಬೆಂಗಳೂರಿನಲ್ಲಿ ವಿವೇಕಾನಂದ ಬಾಲಕ ಸಂಘವನ್ನು ಸ್ಥಾಪಿಸಿರುವುದು. ೫೦ ವರ್ಷಗಳ ಹಿಂದೆ ಸ್ಥಾಪಿತವಾಗಿ ಇದೀಗ ಸುವರ್ಣ ಮಹೋತ್ಸವವನ್ನು ಆಚರಿಸಲು ಸಜ್ಜಾಗುತ್ತಿರುವ ಈ ಅಪರೂಪದ ಸಂಸ್ಥೆಯ ಹುಟ್ಟು, ಬೆಳವಣಿಗೆ ಹಾಗೂ ಸಾಧನೆಗಳು ಇದೊಂದು ಬೆಂಗಳೂರಿನ ಹೆಮ್ಮೆಯ ಸಂಸ್ಥೆಯೆಂಬುದನ್ನು ಸ್ಪಷ್ಟಪಡಿಸುತ್ತವೆ.

ವಿವೇಕಾನಂದ ಬಾಲಕಸಂಘವು ೧೯೫೩ರಲ್ಲಿ ಬೆಂಗಳೂರಿನ ರಾಮಕೃಷ್ಣಾಶ್ರಮದಲ್ಲಿ ಸ್ವಾಮಿ ಯತೀಶ್ವರಾನಂದರ ಪ್ರಯತ್ನದಿಂದ ಪ್ರಾರಂಭಗೊಂಡಿತು. ರಾಮಕೃಷ್ಣ ಮಹಾಸಂಘದ ಹಿರಿಯ ಸಾಧುಗಳಲ್ಲಿ ಒಬ್ಬರಾದ ಸ್ವಾಮಿ ಯತೀಶ್ವರಾನಂದರು, ಉದಾರ ಭಾವನೆಗಳ, ವಿಶಾಲ ದೃಷ್ಟಿಯ ಹಾಗೂ ಸಹಾನುಭೂತಿಯ ಯತಿಗಳಾಗಿದ್ದರಲ್ಲದೆ ಪೂರ್ವ ಹಾಗೂ ಪಶ್ಚಿಮ ರಾಷ್ಟ್ರಗಳ ಸದ್ಭಾವಗಳನ್ನು ಅಂತರ್ಗತ ಮಾಡಿಕೊಂಡ ಕೆಲವೇ ಮಹಾನುಭಾವರಲ್ಲಿ ಒಬ್ಬರಾಗಿದ್ದರು. ಅವರು ೧೯೫೧ರಲ್ಲಿ ಬೆಂಗಳೂರು ಆಶ್ರಮದ ಅಧ್ಯಕ್ಷರಾಗುವ ಮುನ್ನ ಯುರೋಪ್ ಹಾಗೂ ಉತ್ತರ ಅಮೆರಿಕಾದಲ್ಲಿ ವೇದಾಂತ ಪ್ರಚಾರ ಕಾರ್ಯದಲ್ಲಿ ೧೨ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅವರ ಗಮನವನ್ನು ಸೆಳೆದ ಒಂದಂಶವೆಂದರೆ ಧಾರ್ಮಿಕ ಹಾಗೂ ನೈತಿಕ ಸದ್ಭಾವನೆಗಳನ್ನು ಪ್ರಚಾರ ಮಾಡಲು ನಡೆಸುತ್ತಿದ್ದ "ಸಂಡೆ ಸ್ಕೂಲ್"ಗಳು. ಅವರು ಭಾರತಕ್ಕೆ ಹಿಂದಿರುಗಿದ ಮೇಲೆ ಭಾವಿ ಭಾರತದ ಸತ್ ಪ್ರಜೆಗಳ ನಿರ್ಮಾಣಕ್ಕಾಗಿ ಇಂತಹ ಶಾಲೆಯನ್ನು ತೆರೆಯಲು ತವಕ ಪಡುತ್ತಿದ್ದರು. ೧೯೫೨ರಲ್ಲಿ ಅವರು ಕೊಲಂಬೋಕ್ಕೆ ಹೋಗಿದ್ದಾಗ ಅಲ್ಲಿನ ರಾಮಕೃಷ್ಣ ಮಿಷನ್ನಿನವರು ಬಾಲಕರಿಗಾಗಿ ನಡೆಸುತ್ತಿದ್ದ ಧಾರ್ಮಿಕ ಹಾಗೂ ನೈತಿಕ ವಿಚಾರಗಳ ತರಗತಿಗಳನ್ನೊಳಗೊಂಡ "ಸಂಡೆ ಸ್ಕೂಲ್" ಅವರನ್ನು ಬಹುವಾಗಿ ಆಕರ್ಷಿಸಿತು. ಭಾರತದಲ್ಲಿ ಇಂತಹ ಶಾಲೆಯೊಂದನ್ನು ಪ್ರಾರಂಭಿಸಲು ಇನ್ನು ತಡಮಾಡಬಾರದೆನ್ನಿಸಿತು ಅವರಿಗೆ. ಅಂತಹ ಚಟುವಟಿಕೆಗಾಗಿ ಸಂಘವೊಂದನ್ನು ಭಾರತದಲ್ಲಿ ಪ್ರಥಮ ಬಾರಿಗೆ ಪಡೆಯುವ ಭಾಗ್ಯ ಬೆಂಗಳೂರಿನದಾಯಿತು. ಅವರು ಬೆಂಗಳೂರಿಗೆ ಬಂದಕೂಡಲೇ ಆ ರೀತಿಯ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಅದೇ ಪ್ರಕಾರದಲ್ಲಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಜವಾಬ್ದಾರಿಯನ್ನು ಆಶ್ರಮದಲ್ಲಿದ್ದ ಮತ್ತೊಬ್ಬ ಯತಿಗಳಾದ ಸ್ವಾಮಿ ಶಾಸ್ತ್ರಾನಂದಜೀಯವರಿಗೆ ವಹಿಸಿದರು.



ವಿವೇಕಾನಂದ ಬಾಲಕಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಸ್ವಾಮಿ ಯತೀಶ್ವರಾನಂದರು, ಸ್ವಾಮಿ ಶಾಸ್ತ್ರಾನಂದರು

೧೯೫೩ರ ಏಪ್ರಿಲ್‌ನಿಂದ ಬೆಂಗಳೂರು ಆಶ್ರಮದಲ್ಲಿ ಸ್ವಾಮಿ ವಿವೇಕಾನಂದ ಬಾಲಕಸಂಘ ಪ್ರಾರಂಭವಾಯಿತು. ನಾಲ್ಕೈದು ವಿದ್ಯಾರ್ಥಿಗಳೊಂದಿಗೆ ಪ್ರಾರಂಭವಾದ ಈ ಸಂಘದ ಚಟುವಟಿಕೆಗಳು ಸಾಪ್ತಾಹಿಕವಾಗಿದ್ದು ಬಾಲಕರು ಪ್ರತಿ ಭಾನುವಾರ ಆಶ್ರಮದಲ್ಲಿ ಸೇರುತ್ತಿದ್ದರು. ೯ರಿಂದ ೧೦ರವರೆಗೆ ಅರ್ಧ ಗಂಟೆಯ ಎರಡೆರಡು ತರಗತಿಗಳು ನಡೆಯುತ್ತಿದ್ದವು. ಒಂದರಲ್ಲಿ ನೀತಿಕತೆಗಳ ಮೂಲಕ ಮೌಲ್ಯಗಳನ್ನು ಬೆಳೆಸಲು ಹಾಗೂ ಇನ್ನೊಂದು ಭಕ್ತಿಪ್ರಧಾನ ಗೀತೆಗಳನ್ನು ಹೇಳಿಕೊಡುವ ತರಗತಿಗಳಾಗಿದ್ದವು. ಕ್ರಮೇಣ ಬರುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿದಂತೆ ಹೊಸ ಹೊಸ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಯಿತು. ಮಕ್ಕಳಿಗೆ ಆಟ, ಮಿಲ್ಕ್ ಕ್ಯಾಂಟೀನ್ ಸೌಲಭ್ಯ, ಶ್ರಮದಾನದ ಕಾರ್ಯಕ್ರಮಗಳನ್ನು ನಿರೂಪಿಸಲಾಯಿತು. ವಿದ್ಯಾರ್ಥಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡಲು ಉಪಾಧ್ಯಾಯರ ತಂಡವೂ ನಿರ್ಮಾಣವಾಯಿತು. ಪ್ರಸ್ತುತ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿರುವ ಸ್ವಾಮಿ ಹರ್ಷಾನಂದಜೀಯವರು ೧೯೫೩ರಿಂದ ೧೯೫೭ರವರೆಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ.

ದಿವ್ಯತ್ರಯರ ಸನ್ನಿಧಾನ, ಯತೀಶ್ವರಾನಂದಜೀಯವರ ವಾತ್ಸಲ್ಯ, ಶಾಸ್ತ್ರಾನಂದಜೀಯವರ ಸನ್ಮಾರ್ಗದರ್ಶನ, ಉಪಾಧ್ಯಾಯ ವೃಂದದ ಸ್ನೇಹಪೂರ್ವಕ ಒಡನಾಟ ಇವೆಲ್ಲವುಗಳಿಂದಾಗಿ ಮೊದಲ ದಶಕದಲ್ಲೇ ಬಾಲಕಸಂಘ ಪ್ರಸಿದ್ಧವಾಯಿತು. ಸತ್ಸಂಕಲ್ಪದ ಪ್ರೇರಣೆಯಿಂದ ಪ್ರಯೋಗಶೀಲ ಚಟುವಟಿಕೆಯಾಗಿ ಹುಟ್ಟಿ ಬೆಳೆದ ಸಂಘ, ದಕ್ಷನಿರ್ವಹಣೆಗಾಗಿ ಭದ್ರ ತಳಹದಿಗಾಗಿ ಕೆಲವು ಕಾರ್ಯವಿಧಾನ, ನಿಯಮ ನಿಬಂಧನೆಗಳನ್ನು ಗುರುತಿಸಿಕೊಳ್ಳಬೇಕಾಯಿತು. ಹೀಗಾಗಿ ಬಾಲಕ ಸಂಘದ ಧ್ಯೇಯೋದ್ದೇಶಗಳನ್ನು ಒಂದು ಸುಂದರ ಹೊತ್ತಿಗೆಯ ಮೂಲಕ ೧೯೬೩ರಲ್ಲಿ ಪ್ರಕಟಿಸಲಾಯಿತು. ಮುಖ್ಯವಾಗಿ ಅದರಲ್ಲಿನ ಉದ್ದೇಶಗಳು ಈ ರೀತಿ ಇದ್ದವು:

**೧) ದೈಹಿಕ, ಮಾನಸಿಕ, ನೈತಿಕ ಹಾಗೂ ಆಧ್ಯಾತ್ಮಿಕ ತಳಹದಿಯ ಮೇಲೆ ಸರ್ವತೋಮುಖ ಬೆಳವಣಿಗೆಯ ನಿರೂಪಣೆ.**

**೨) ಪ್ರತಿಯೋರ್ವನ ಘನತೆ ಗೌರವಗಳನ್ನು ಮಾನ್ಯ ಮಾಡಿ ಎಲ್ಲರ ಆಧ್ಯಾತ್ಮಿಕ ಏಕತೆಯನ್ನು, ಸರ್ವ ಸಮಾನತ್ವವನ್ನು ಅಂಗೀಕರಿಸಿ ಸಹಬಾಳ್ವೆ ಸಾಧಿಸುವುದು.**

**೩) ಒಬ್ಬನ ಪ್ರಗತಿ ಹಿತಗಳು ಇತರರ ಪ್ರಗತಿ ಹಿತವನ್ನೇ ಅವಲಂಬಿಸಿವೆ ಎಂಬ ಸತ್ಯವನ್ನು ಅರಿತು ಪರಸ್ಪರ ಸಹಕಾರ ಸೌಹಾರ್ದಗಳು ಜೀವನದ ಅವಿಭಾಜ್ಯ ಅಂಗ ಎಂದು ಮನಗಂಡು ನಡೆಯುವುದು.**

**೪) ಪ್ರತಿಯೋರ್ವನೂ ತನ್ನ ಏಳ್ಗೆಗೆ ತಾನೇ ಶಿಲ್ಪಿ ಎಂಬ ಸತ್ಯವನ್ನು ಎಲ್ಲರಿಗೂ ನಿರೂಪಿಸಿ, ಸಮಾಜದ ಹಾಗೂ ವೈಯಕ್ತಿಕ ಅಭಿವೃದ್ಧಿಗೆ ಮಾಡುವ ಏಕಪ್ರಕಾರವಾದ ಸಹನಶೀಲ ಕಾರ್ಯಪ್ರಯತ್ನಕ್ಕೆ ಯಾವುದೇ ಬದಲೀ ಫಲವೂ ಇಲ್ಲ ಎಂಬ ಸತ್ಯವನ್ನು ತಿಳಿಸುವುದು.**

ಹೀಗೆ ಸ್ಪಷ್ಟ ಧ್ಯೇಯೋದ್ದೇಶ, ನಿರ್ದಿಷ್ಟಗುರಿ, ಸೂಕ್ತ ಮಾರ್ಗದರ್ಶನ ಹಾಗೂ ಚಟುವಟಿಕೆಗಳಿಂದಾಗಿ ಬಾಲಕಸಂಘ ವ್ಯವಸ್ಥಿತ ರೀತಿಯಲ್ಲಿ ಅಭಿವೃದ್ಧಿಗೊಂಡಿತು. ತಮ್ಮ ಬಾಲಕ ಸಂಘದ ಪರಿಕಲ್ಪನೆಗೆ ಸಾಕಾರ ರೂಪ ನೀಡಿದ ಯತೀಶ್ವರಾನಂದಜೀಯವರು ೧೯೬೫ರ ಡಿಸೆಂಬರ್‌ನಲ್ಲಿ ಬೇಲೂರು ಮಠಕ್ಕೆ ತೆರಳಿದರು. ೧೯೫೩ರಿಂದ ಬಾಲಕಸಂಘವನ್ನು ರೂಪಿಸಿದ ಸ್ವಾಮಿ ಶಾಸ್ತ್ರಾನಂದರು, ರಾಮಕೃಷ್ಣ ಮಹಾಸಂಘದ ಆದೇಶದ ಮೇರೆಗೆ ೧೯೬೪ರ ಜೂನ್ ತಿಂಗಳಿನಲ್ಲಿ ಅಮೆರಿಕಾದ ಹಾಲಿವುಡ್‌ಗೆ ತೆರಳಬೇಕಾಯಿತು. ನಂತರ ಬಾಲಕಸಂಘದ ಪ್ರಾರಂಭದಿಂದಲೂ ಅದರ ಚಟುವಟಿಕೆಗಳಲ್ಲಿ ನೆರವಾಗುತ್ತಿದ್ದ ಸ್ವಾಮಿ ದೇವರೂಪಾನಂದರು ೧೯೬೬ರವರೆಗೆ ಎರಡು ವರ್ಷಗಳ ಕಾಲ ಮೇಲ್ವಿಚಾರಕರಾಗಿದ್ದರು. ೧೯೬೬ರಲ್ಲಿ ಬಾಲಕಸಂಘದ ಮೇಲ್ವಿಚಾರಕರಾದವರು ಸ್ವಾಮಿ ಪುರುಷೋತ್ತಮಾನಂದಜೀ. ಸುಮಾರು ಎರಡೂವರೆ ದಶಕಗಳ ದೀರ್ಘಕಾಲದ ಇವರ ವಿಶೇಷ ಮಾರ್ಗದರ್ಶನದಲ್ಲಿ ವಿವೇಕಾನಂದ ಬಾಲಕಸಂಘವು (ವಿಬಿಎಸ್) ಸರ್ವತೋಮುಖ ಅಭಿವೃದ್ಧಿ ಹೊಂದಿತು.



ವಸ್ತುಪ್ರದರ್ಶನವೊಂದನ್ನು ವೀಕ್ಷಿಸುತ್ತಿರುವ ಸ್ವಾಮಿ ಚಿದಾನಂದಜಿ, ಸ್ವಾಮಿ ಪುರುಷೋತ್ತಮಾನಂದಜಿ

ಈ ಸಂಘದಲ್ಲಿದ್ದು ಬೆಳೆದಮೇಲೂ ಈ ದಿವ್ಯಸಂಪರ್ಕವನ್ನು ಬಿಡಲಿಚ್ಛಿಸದೆ ಕೆಲವರು ಇಲ್ಲಿಗೆ ಬಂದು ಸಹಾಯ ಮಾಡುತ್ತಿದ್ದರು. ಅವರಿಗಾಗಿ ವಿಶಿಷ್ಟ ತರಬೇತಿ ನೀಡಲು ೧೯೭೪ರ ಜನವರಿ ಒಂದರಂದು ವಿವೇಕಾನಂದ ಯುವಕಸಂಘವನ್ನು ಪ್ರಾರಂಭಿಸಲಾಯಿತು. ಇಂದು ಈ ಎರಡೂ ಸಂಘಗಳು ಒಂದಕ್ಕೊಂದು ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ಎರಡೂ ಸಂಘಗಳಲ್ಲಿದ್ದು, ಅಧ್ಯಾತ್ಮದಲ್ಲಿ ಆಸಕ್ತಿ ಹುಟ್ಟಿ ನಂತರ ಯತಿಗಳಾಗಿ ದೀಕ್ಷೆ ಪಡೆದ ನಿದರ್ಶನಗಳೂ ಹಲವಾರಿವೆ. ಹೈದರಾಬಾದ್ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಪರಮಾರ್ಥಾನಂದಜಿ, ಕೊಲಂಬೋದ ಮಠದಲ್ಲಿರುವ ಸ್ವಾಮಿ ರಾಜೇಶ್ವರಾನಂದಜಿ, ಜಮ್ಮುವಿನ ಮಿಷನ್ನಿನ ಮುಖ್ಯಸ್ಥರಾದ ಸ್ವಾಮಿ ಗಿರಿಜೇಶಾನಂದಜಿ, ಮೈಸೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ, ಹಿಮಾಲಯದ ಮಾಯಾವತಿಯ ಅದ್ವೈತಾಶ್ರಮದ ಭಾಸ್ವತಾನಂದಜಿ, ಚೆನ್ನೈನ ಭಕ್ತಿಕಾಮಾನಂದಜಿ, ಸ್ವಾಮಿ ಬೋಧಮಯಾನಂದಜಿ, ಹರಿದ್ವಾರದ ಕಂಕಲ್‌ನ ಉಮೇಶ್ವರಾನಂದಜಿ, ವಾರಾಣಸಿಯ ವಾಗೀಶ್ವರಾನಂದಜಿ, ಮಧುರೈನ ಸ್ವಾಮಿ ಸತ್ಯವಿದಾನಂದಜಿ —ಇವರೆಲ್ಲ ವಿಬಿಎಸ್‌ನವರೇ. ರಾಮಕೃಷ್ಣ ಮಿಷನ್‌ಗೆ ಬಂಗಾಳವನ್ನು ಬಿಟ್ಟರೆ ಅತಿ ಹೆಚ್ಚು ಯತಿಗಳನ್ನು ಕೊಟ್ಟ ಹೆಗ್ಗಳಿಕೆ ಕರ್ನಾಟಕದ್ದೆಂಬುದು ಇಲ್ಲಿ ಗಮನಾರ್ಹ.

ವಿಬಿಎಸ್‌ನಿಂದ ವ್ಯಕ್ತಿತ್ವ ವಿಕಸನಗೊಂಡು ನಂತರ ಸದ್ಗೃಹಸ್ಥರಾಗಿ ಸಮಾಜದ ನಾನಾ ಸ್ತರಗಳಲ್ಲಿ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆಯೂ ಅಪಾರವಾಗಿದೆ. ವಿದ್ಯಾರ್ಥಿಯ ವ್ಯಕ್ತಿತ್ವವು ಸಂಪೂರ್ಣವಾಗಿ ರೂಪುಗೊಳ್ಳಲು ದೈಹಿಕ, ಬೌದ್ಧಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಸೇವಾ ಕಾರ್ಯಗಳಲ್ಲೂ ಆಧ್ಯಾತ್ಮಿಕ ವಿಷಯಗಳಲ್ಲೂ ಅವರನ್ನು ತೊಡಗಿಸಲಾಗುತ್ತದೆ. ಬಹಳ ಹಿಂದೆಯೇ ನಾನಾ ರೀತಿಯ ಕ್ರೀಡೆಗಳಲ್ಲಿ ಇವರನ್ನು ತೊಡಗಿಸಲಾಗುತ್ತಿತ್ತು. ೧೯೬೦ರ ದಶಕದಲ್ಲಿ ನಿರ್ಮಾಣಗೊಂಡ ಬ್ಯಾಸ್ಕೆಟ್‌ಬಾಲ್ ತಂಡವು ನಗರದ ಒಂದು ಉತ್ತಮ ತಂಡವೆಂದೇ ಪರಿಗಣಿಸಲ್ಪಟ್ಟಿತ್ತು. ಜಿಮ್ನಾಶಿಯಂನ್ನು ೧೯೭೫ರಲ್ಲಿ

ಪ್ರಾರಂಭಿಸಲಾಯಿತು. ೧೯೮೪ರಲ್ಲಿ ಯೋಗಾಸನ ಮತ್ತು ಅಂಗ ಸಾಧನೆಯನ್ನು ಹೇಳಿಕೊಡುವ ವ್ಯವಸ್ಥೆಯನ್ನೂ ಮಾಡಲಾಯಿತು.

ಬಾಲಕರಲ್ಲಿ ಸ್ವಸಹಾಯ ಪ್ರವೃತ್ತಿ, ಶುಚಿತ್ವ ಹಾಗೂ ಕಾರ್ಯಗೌರವವನ್ನು ಬೆಳೆಸಲು ಹಲವಾರು ರೀತಿಯ ಚಟುವಟಿಕೆಗಳಿವೆ. ಆಶ್ರಮದ ವಿವಿಧ ಕಟ್ಟಡಗಳ ಆವರಣಗಳನ್ನು ತರಗತಿಯ ಕೊಠಡಿಗಳನ್ನು, ಕ್ರೀಡಾಂಗಣ, ಶೌಚಗೃಹ, ಪ್ರಾರ್ಥನಾ ಮಂದಿರ, ಸಭಾಂಗಣ ಮುಂತಾದ ಜಾಗಗಳನ್ನು ಶುಚಿಗೊಳಿಸುವ ಕೆಲಸ ಇವರದ್ದೇ. ಇಲ್ಲಿ ಪ್ರತಿವರ್ಷ ದಿವ್ಯತ್ರಯರ ಜನ್ಮದಿನಗಳ ಸಂಬಂಧವಾಗಿ ೧೨ ದಿನಗಳ ಕಾಲ ನಡೆಯುವ ಕಾರ್ಯಕ್ರಮಗಳು, ಜಯಂತ್ಯೋತ್ಸವಗಳು, ಆಧ್ಯಾತ್ಮಿಕ ಶಿಬಿರಗಳು, ವಿಶೇಷ ಉಪನ್ಯಾಸಗಳು, ಮುಂತಾದವುಗಳಿಗೆ ಸಾವಿರಾರು ಭಕ್ತರು ಬರುತ್ತಾರೆ. ಆಗೆಲ್ಲ ಪಾದರಕ್ಷಾಕ್ಷೇತ್ರದ ಮೇಲ್ವಿಚಾರಣೆ, ಪ್ರಸಾದ ವಿತರಣೆ, ಪುಸ್ತಕ ಮಳಿಗೆಗೆ ನೆರವು, ಶ್ರೀರಾಮಕೃಷ್ಣ ಸಭಾಂಗಣಕ್ಕೆ ಎರಡೂವರೆ ಮೂರು ಸಾವಿರ ಕುರ್ಚಿಗಳನ್ನು ಉಗ್ರಾಣದಿಂದ ತಂದು ವ್ಯವಸ್ಥಿತವಾಗಿ ಜೋಡಿಸಿ ನಂತರ ಅವನ್ನು ಅಷ್ಟೇ ವ್ಯವಸ್ಥಿತವಾಗಿ ಉಗ್ರಾಣಕ್ಕೆ ಸೇರಿಸುವುದು, ರಂಗಸಜ್ಜಿಕೆ, ಧ್ವನಿವರ್ಧಕದ ವ್ಯವಸ್ಥೆ—ಈ ಎಲ್ಲ ಕಾರ್ಯಗಳನ್ನು ನಿರ್ವಹಿಸುವವರು ಸಂಘದ ಬಾಲಕರೇ. ಬಿಳಿ ಪಂಚೆ, ಬಿಳಿ ಶರ್ಟ್ ಧರಿಸಿ ಕಾರ್ಯಮಗ್ನರಾಗಿರುವ ಈ ಬಾಲಕ, ಯುವಕರ ತಂಡವನ್ನು ಅನೇಕ ಹಿರಿಯರು "ವೈಟ್ ಬ್ರಿಗೇಡ್" ಎಂದೇ ಕರೆದಿದ್ದಾರೆ. ಆಶ್ರಮದ ಪ್ರಾರ್ಥನಾ ಮಂದಿರವನ್ನು ಶುಚಿಗೊಳಿಸುವ ಕಾರ್ಯದಲ್ಲಿ ೩೬೫ ದಿನಗಳೂ ಈ ಬಾಲಕರು ಪಾಲ್ಗೊಳ್ಳುತ್ತಾರೆ. ವಾರಕ್ಕೊಮ್ಮೆ ಸರದಿಯಂತೆ ಬಾಲಕರು ನಡೆಸುವ ಈ ಕಾರ್ಯಕ್ಕೆ "ಕೈಂಕರ್ಯ" ಎಂಬ ಅಧ್ಯಾತ್ಮಸೂಚಕ ಹೆಸರನ್ನೇ ಇಡಲಾಗಿದೆ. ಈ ಎಲ್ಲ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಇವರಿಗೆ ಶುಚಿಯಾದ, ರುಚಿಯಾದ ಬಗೆಬಗೆಯಾದ ಆಹಾರವನ್ನು ನೀಡಲಾಗುತ್ತದೆ. ಇಲ್ಲಿನ ರುಚಿಗೆ ಒಗ್ಗಿದ ಮಕ್ಕಳು ಮನೆಯಲ್ಲಿ ಸರಿಯಾಗಿ ಊಟ ಮಾಡುವುದಿಲ್ಲವೆಂದು ಕೆಲವು ಪೋಷಕರು ಹೇಳಿದ್ದೂ ಉಂಟು!

ಈ ಬಾಲಕರ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗಾಗಿ ಹಲವಾರು ಕಾರ್ಯಕ್ರಮಗಳಿವೆ. ಪ್ರಾರ್ಥನೆ, ವೇದಾಭ್ಯಾಸ, ಭಜನೆ ತರಗತಿಗಳಿವೆ. ತಬಲ ಹಾರ್ಮೋನಿಯಂನಂಥ ವಾದ್ಯಗಳನ್ನು ಕಲಿಯಲು ಪ್ರೋತ್ಸಾಹಿಸಲಾಗುತ್ತದೆ. ಈ ರೀತಿ ವಾದ್ಯವೃಂದವುಳ್ಳ ಉತ್ತಮ ಭಜನಾ ತಂಡಗಳೂ ರೂಪಿತವಾಗಿವೆ. ವಿಶೇಷ ಉತ್ಸವಗಳಲ್ಲಿ ಈ ತಂಡ ನೀಡುವ ಭಜನೆ ಸಾವಿರಾರು ಭಕ್ತರ ಮನಸ್ಸಿಗೆ ಮುದ ನೀಡುತ್ತದೆ. ಶ್ರೀರಾಮಕೃಷ್ಣ ಪರಮಹಂಸರ, ಶ್ರೀ ಶಾರದಾ ಮಾತೆಯವರ, ಸ್ವಾಮಿ ವಿವೇಕಾನಂದರ ದಿವ್ಯ ಸಂದೇಶಗಳನ್ನು ಅರಿಯುವ ಸಾಹಿತ್ಯಾಭ್ಯಾಸ, ವೈಜ್ಞಾನಿಕ, ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ. ಬಾಲಕರ ಮನೋವಿಕಾಸಕ್ಕೆ ಪೂರಕವಾಗಿ ಹಲವಾರು ಕ್ಷೇತ್ರಗಳ ಜ್ಞಾನಾರ್ಜನೆಗೆ ಪೂರಕವಾಗುವ ಪುಸ್ತಕಗಳುಳ್ಳ ಉತ್ತಮ ಗ್ರಂಥಾಲಯವು ಇವರಿಗಾಗಿ ಇದೆ. ಪುಸ್ತಕಗಳಷ್ಟೇ ಅಲ್ಲದೆ ವಿಡಿಯೋ ಕ್ಯಾಸೆಟ್‌ಗಳೂ, ಸಿಡಿಗಳೂ, ಸ್ಲೈಡ್‌ಗಳೂ ಸಹ ಇಲ್ಲಿ ಬಳಕೆಯಾಗುತ್ತವೆ. ಇವೆಲ್ಲದರ ನಿರ್ವಹಣಾ ಜವಾಬ್ದಾರಿ ಬಾಲಕರದ್ದೇ.

ಪ್ರತಿ ವರ್ಷ ಬೇಸಿಗೆಯಲ್ಲಿ "ವಸಂತ ವಿಹಾರ"ವೆಂಬ ಶಿಬಿರವನ್ನೂ ನಡೆಸಲಾಗುತ್ತದೆ. ಬಾಲಕ ಸಂಘದ ಎಲ್ಲ ಚಟುವಟಿಕೆಗಳನ್ನೂ ಇಲ್ಲಿ ಸಂಕ್ಷಿಪ್ತ ರೂಪದಲ್ಲಿ ಅಳವಡಿಸಲಾಗುತ್ತದೆ. ಈ ಶಿಬಿರದ ಯೋಜನೆ, ನಿರ್ವಹಣೆ ಇವೆಲ್ಲವನ್ನೂ ಸೂಕ್ತ ಮಾರ್ಗದರ್ಶನದೊಂದಿಗೆ ನಡೆಸುವವರು ಇಲ್ಲಿನ ಯುವಕರೇ.

ಬಾಲಕರ ಸಾಹಿತ್ಯಿಕ ಮತ್ತು ಕಲಾತ್ಮಕ ಪ್ರತಿಭೆಗಳನ್ನು ಬೆಳಕಿಗೆ ತರಲು "ವಿವೇಕ ಮಂಜೂಷಾ" (ವಿವೇಕದ ಪೆಟ್ಟಿಗೆ) ಎಂಬ ಹಸ್ತಲಿಖಿತ ಪತ್ರಿಕೆಯನ್ನು ಹೊರತರಲಾಗುತ್ತಿದೆ. ಸಂಘದ ೨೫ ವರ್ಷಗಳ ನೆನಪಿಗಾಗಿ ೧೯೮೮ರಲ್ಲಿ ಸಂಕಲನ ಸಂಚಿಕೆಯನ್ನು ಹೊರತರಲಾಯಿತು. ಇವಿಷ್ಟೇ ಅಲ್ಲದೆ ಚಿತ್ರಕಲೆ, ಅಂಚೆಚೀಟಿ ಸಂಗ್ರಹ ಮುಂತಾದ ಕ್ರಿಯಾತ್ಮಕ ಹವ್ಯಾಸಗಳಲ್ಲಿ ಬಾಲಕರನ್ನು ತೊಡಗಿಸಿ ಸಾರ್ವಜನಿಕರಿಗಾಗಿ ಆಗಾಗ ವಸ್ತುಪ್ರದರ್ಶನವನ್ನೂ ಏರ್ಪಡಿಸಲಾಗುತ್ತದೆ.

ಬಾಲಕ ಯುವಕ ಸಂಘದ ವಿಶೇಷವೆಂದರೆ ಇದರ ವಾರ್ಷಿಕೋತ್ಸವ. ಸಾಮಾನ್ಯವಾಗಿ ಜನವರಿಯಲ್ಲಿ ಜರುಗುವ ಈ ಉತ್ಸವವನ್ನು ಸಂಪೂರ್ಣವಾಗಿ ನಿರ್ವಹಿಸುವವರು ಈ ಯುವಕರೇ. ಈ ಸಂದರ್ಭದಲ್ಲಿ ಇವರು ಮಂಡಿಸುವ ಕೋಲಾಟ, ಸಾಮಾಜಿಕ-ಪೌರಾಣಿಕ ನಾಟಕಗಳು ಬಹಳ ಪ್ರಸಿದ್ಧ. ವೃತ್ತಿಪರ ಸಂಸ್ಥೆಗಳನ್ನು ಮೀರಿಸುವ ರೀತಿಯಲ್ಲಿ ಪ್ರದರ್ಶಿಸುವ ಇವನ್ನು ನೋಡಲು ಸುಮಾರು ಎರಡು ಸಾವಿರ ಜನ ಬರುತ್ತಾರೆ.

ಹೀಗೆ ವಿಶಿಷ್ಟ ರೀತಿಯಲ್ಲಿ ಸಾಗಿಬಂದ ಬಾಲಕ ಸಂಘವು ತನ್ನ ಹುಟ್ಟುಹಬ್ಬದ ೫೦ ವಸಂತಗಳನ್ನು ಮುಗಿಸಿ ಸುವರ್ಣ ಮಹೋತ್ಸವವನ್ನು ಆಚರಿಸಲು ಸಜ್ಜಾಗುತ್ತಿದೆ.

( ಕೃಪೆ : ಉದಯವಾಣಿ ದೈನಿಕ, ಮಾರ್ಚ್ ೧೭ ಮತ್ತು ೨೪ರ ದಿನಾಂಕಗಳ ಸಂಚಿಕೆಗಳು )

## ವಿವೇಕಾನಂದ ಬಾಲಕಸಂಘದ ಸುವರ್ಣಮಹೋತ್ಸವ

**1953-2003**

ಕಾರ್ಯಕ್ರಮಗಳು

| | |
|---|---|
| ಮೇ 30 | ಉದ್ಘಾಟನಾ ಸಮಾರಂಭ |
| ಮೇ 31 | ಸಾಂಸ್ಕೃತಿಕ ದಿವಸ |
| ಜೂನ್ 1 | ಬೆಳಿಗ್ಗೆ : ಸದಸ್ಯರಿಗೆ ಆಧ್ಯಾತ್ಮಿಕ ಶಿಬಿರ<br>ಸಂಜೆ : ವಿಶೇಷ ಸಮಾಗಮ ಹಾಗೂ ಸನ್ಮಾನ ಸಮಾರಂಭ, "ವಿವೇಕ ಮಂಜೂಷಾ"ದ ಬಿಡುಗಡೆ. |